www.ecourtsindia.com



**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

**ಸಿ ಸಿ ಸಂಖ್ಯೆ- 1538/2023**

| | |
|---|---|
| ಸಾಕ್ಷಿಯ ಹೆಸರು | ಮಹಮ್ಮದ್ ಇಬ್ರಾಹಿಂ |
| ತಂದೆಯ ಹೆಸರು | ಶೇಕ್ ಅಬ್ದುಲ್ ಕುರ್ಗೂಸ್ |
| ವಯಸ್ಸು | 59 ವರ್ಷ |
| ಉದ್ಯೋಗ | ಅರಣ್ಯ ಇಲಾಖೆ, ದಿನಗೂಲಿ ನೌಕರ |
| ವಾಸಸ್ಥಳ | ಉಂಬ್ಳೆಬೈಲು |
| ದಿನಾಂಕ | 25-02-2025 |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಐ.ಎಮ್.ಎಚ್. ವಕೀಲರಿಂದ ,**

1. ಪಿರ್ಯಾದಿ ನನಗೆ 2- 3 ವರ್ಷಗಳಿಂದ ತಿಳಿದಿರುತ್ತಾರೆ. ನಾನು ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದು, ನನಗೆ ಮಾಸಿಕ ರೂ. 35,000/- ವೇತನ ಇರುತ್ತದೆ. ನಾನು ಪಿರ್ಯಾದಿಯಿಂದ ದಿಃ 29-04-2022 ರಂದು ಯಾವುದೇ ಹಣ ಪಡೆದಿರುವುದಿಲ್ಲ. ನಾನು ಪಿರ್ಯಾದಿಯಿಂದ ಯಾವುದೇ ಸಾಲ ಪಡೆದಿರುವುದಿಲ್ಲ, ಆದರೆ ನನ್ನ ಹೆಂಡತಿ ಹಾಗೂ ಪಿರ್ಯಾದಿ ನಡುವೆ ಹಣಕಾಸಿನ ವ್ಯವಹಾರ ಇರುತ್ತದೆ. ಅವರ ನಡುವೆ ವ್ಯಾಜ್ಯ ಉಂಟಾಗಿ ನನ್ನ ಹೆಂಡತಿಯು ಪಿರ್ಯಾದಿ ವಿರುದ್ದ ದಿಃ 29-04-2022 ರಲ್ಲಿ ಪೋಲೀಸರಲ್ಲಿ ದೂರು ದಾಖಲಿಸಿರುತ್ತಾರೆ. ಪಿರ್ಯಾದಿಯು ನನ್ನ ಹೆಂಡತಿಗೆ ದೂರವಾಣಿ ಕರೆ ಮಾಡಿ ಕಿರುಕುಳ ನೀಡುತ್ತಿದ್ದ ಕಾರಣ ನನ್ನ ಹೆಂಡತಿ ಆತನ ವಿರುದ್ಧ ಪೋಲೀಸರಲ್ಲಿ ದೂರು ದಾಖಲಿಸಿದ್ದರು. ಆ ಪೂರ್ವದಲ್ಲಿ ನನ್ನ ಹೆಂಡತಿ ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ದೂರು ದಾಖಲಿಸಿದ ನಂತರ ನನ್ನನ್ನು, ನನ್ನ ಹೆಂಡತಿ ಹಾಗೂ ಪಿರ್ಯಾದಿಯನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಅಲ್ಲಿ ಪೋಲೀಸರು 4 ಕಂತುಗಳಲ್ಲಿ ನಾನು ಪಿರ್ಯಾದಿಗೆ ರೂ. 7,50,000/- ಗಳನ್ನು ಕೊಡಬೇಕೆಂದು ಬರೆಸಿಕೊಂಡಿರುತ್ತಾರೆ. ಪೋಲೀಸರು ಆ ಸಮಯ ನನ್ನಿಂದ ಖಾಲಿ ಇದ್ದ 2 ಪ್ರೊನೋಟ್ ಹಾಗೂ 2 ಚೆಕ್ಕುಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಪೋಲೀಸರು ಸದರಿ ಸಹಿಗಳನ್ನು ನನ್ನಿಂದ ಬಲವಂತವಾಗಿ

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-6.pdf

ಪಡೆದಿರುತ್ತಾರೆ. ನಾನು ಪಿರ್ಯಾದಿಗೆ ಯಾವುದೇ ಹಣ ನೀಡಲು ಬಾದ್ಯಸ್ಥನಾಗಿರುವುದಿಲ್ಲ. ಆ ಕಾರಣ ದೂರನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಿರ್ಯಾದಿದಾರರ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದು ಅವರ ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

*ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.*

*(ಟಿ.ಶ್ರೀಕಾಂತ್)*
*ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,*
*ಭದ್ರಾವತಿ.*

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-6.pdf